**1 ನೇ ಹೆಚ್ಚುವರಿ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಭದ್ರಾವತಿ**

**EX.No.** 15 /2023

| | | | |
|---|---|---|---|
| ಸಾಕ್ಷಿಯ ಹೆಸರು | : | ಮಂಜುನಾಥ | ಸಿಡಬ್ಲ್ಯು-1 |
| ತಂದೆ ಹೆಸರು | : | ನಾರಾಯಣ | |
| ವಯಸ್ಸು | : | 37 ವರ್ಷ | ದಿನಾಂಕಃ 25.02.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು |
| ಉದ್ಯೋಗ | : | ಭೂ ಮಾಪಕರು | |
| ವಾಸ ಸ್ಥಳ | : | ತರಿಕೆರೆ | |

**ಮುಖ್ಯ ವಿಚಾರಣೆಃ ನ್ಯಾಯಾಲಯದಿಂದಃ-**

ನಾನು ಭದ್ರಾವತಿಯಲ್ಲಿರುವ ಭೂ ದಾಖಲೆಗಳ ಸಹಾಯಕ ನಿರ್ದೇಶಕರ ಕಛೇರಿಯಲ್ಲಿ ಭೂ ಮಾಪಕನಾಗಿ ಕಳೆದ 2 ವರ್ಷಗಳಿಂದ ಕೆಲಸ ಮಾಡುತ್ತಿದ್ದೇನೆ.

ಈ ಪ್ರಕರಣದಲ್ಲಿ ನ್ಯಾಯಾಲಯದ ಬೇಲಿಫ್ ರವರಿಗೆ ಡಿಲವರಿ ವಾರೆಂಟ್ ಜಾರಿಗೊಳಿಸುವ ಸಲುವಾಗಿ ಸಹಾಯ ಮಾಡುವಂತೆ ನನಗೆ ನ್ಯಾಯಾಲಯದಿಂದ ನಿರ್ದೇಶನ ಬಂದಿತ್ತು. ಅದರಂತೆ ನಾನು ನ್ಯಾಯಾಲಯದ ಬೇಲಿಫ್‌ರವರ ಜೊತೆ ದಿನಾಂಕ 12-11-2024 ರಂದು ತಳ್ಳಿಕಟ್ಟೆ ಗ್ರಾಮದಲ್ಲಿರುವ ಸರ್ವೆ ನಂಬರ್ 141/2 ರ ಮತ್ತು 142/2 ರ ಜಮೀನಿಗೆ ಹೋಗಿದ್ದೆ. ನ್ಯಾಯಾಲಯದ ಆದೇಶದಂತೆ ಮತ್ತು ಬೇಲಿಫ್ ರವರ ಕೋರಿಕೆಯಂತೆ ಸದರಿ ಎರಡೂ ಸರ್ವೆ ನಂಬರ್ ಗಳಲ್ಲಿರುವ ಜಮೀನಿನ ಗಡಿಗಳನ್ನು ಸದರಿ

ದಿನ ಗುರುತು ಮಾಡಿಕೊಟ್ಟಿರುತ್ತೇನೆ. ಆ ಸಂದರ್ಭದಲ್ಲಿ ಡಿಕ್ರಿದಾರರು, ತೀರ್ಪುಋಣಿಯರು, ನ್ಯಾಯಾಲಯದ ಬೇಲಿಫ್ ರವರು, ಗ್ರಾಮಸ್ಥರು ಮತ್ತು ಪೊಲೀಸರು ಇದ್ದರು.

ಗಡಿ ಗುರುತಿಸಿದ ನಂತರ ಮೇಲ್ಕಂಡ ಎರಡೂ ಸರ್ವೆ ನಂಬರ್ ಗಳಲ್ಲಿನ ಜಮೀನನ್ನು ನ್ಯಾಯಾಲಯದ ಬೇಲಿಫ್ ರವರು ಡಿಕ್ರಿದಾರರ ಸ್ವಾಧೀನಕ್ಕೆ ಕೊಟ್ಟು ಆ ಬಗ್ಗೆ ದಾಖಲೆ ಬರೆದರು. ಸದರಿ ಸ್ವಾಧೀನ ರಶೀದಿ ದಾಖಲೆಯನ್ನು ಈಗ ನೋಡಿ ಗುರುತಿಸುತ್ತಿದ್ದೇನೆ. ಸಾಕ್ಷಿ ಗುರುತಿಸಿದ ರಶೀದಿ ದಾಖಲೆಯನ್ನು **ನಿಸಿ–1** ಎಂದು ಗುರುತಿಸಲಾಯಿತು. ಕೋರ್ಟ್ ಬೇಲಿಫ್ ರವರು ಮಹಜರ್ ದಾಖಲೆಯನ್ನು ಈಗ ನೋಡಿ ಗುರುತಿಸಿದ್ದು ಅದನ್ನು ಈಗ **ನಿಸಿ–2** ಎಂದು ಗುರುತಿಸಲಾಯಿತು. ನಿಸಿ–1 ಮತ್ತು 2 ರ ದಾಖಲೆಗಳಲ್ಲಿ ನನ್ನ ಸಹಿಗಳನ್ನು ಕ್ರಮವಾಗಿ **ನಿಸಿ–1(ಎ) ಮತ್ತು ನಿಸಿ–2(ಎ)** ಎಂದು ಗುರುತಿಸಲಾಯಿತು.

ನಾನು ಗಡಿ ಗುರುತಿಸಿದ ನಂತರ ಸದರಿ ಜಮೀನುಗಳ ಸ್ವಾಧೀನವನ್ನು ಡಿಕ್ರಿದಾರರಿಗೆ ಕೊಟ್ಟ ಬಗ್ಗೆ ಬೇಲಿಫ್ ರವರು ನ್ಯಾಯಾಲಯಕ್ಕೆ ಸಲ್ಲಿಸುವ ಸಲುವಾಗಿ ಒಂದು ವರದಿ ತಯಾರಿಸಿದ್ದು, ಅದಕ್ಕೆ ನಮ್ಮ ಸಹಿ ಪಡೆದರು. ಸದರಿ ದಾಖಲೆಯನ್ನು ಈಗ ನೋಡುತ್ತಿದ್ದು ಅದನ್ನು **ನಿಸಿ–3** ಎಂದು ಮತ್ತು ನನ್ನ ಸಹಿಯನ್ನು **ನಿಸಿ–3(ಎ)** ಎಂದು ಗುರುತಿಸಲಾಯಿತು.

ನಾನು ಗಡಿ ಗುರುತಿಸಿದ ಕಾಲಕ್ಕೆ ಸರ್ವೆ ನಂಬರ್ 141/2 ಮತ್ತು 142/2 ರಲ್ಲಿ ತೀರ್ಪುಋಣಿಯರು ಒತ್ತುವರಿ ಮಾಡಿದ್ದ 14 ಗುಂಟೆ ಜಮೀನು ಸಹ ಸದರಿ ಸರ್ವೆ ನಂಬರಿನ ಗಡಿಯ ಒಳಗೆ ಬಂದಿತ್ತು. ಸದರಿ 14 ಗುಂಟೆ ಒತ್ತುವರಿ ಜಮೀನಿನ ಸ್ವಾಧೀನವನ್ನು ಬೇಲಿಫ್ ರವರು ಡಿಕ್ರಿದಾರರಿಗೆ ಹಸ್ತಾಂತರಿಸಿ ನಿಸಿ–1 ರಿಂದ 3 ರ ದಾಖಲೆಗಳನ್ನು ಬರೆದಿರುತ್ತಾರೆ.

**<u>ಪಾಟೀ ಸವಾಲುಃ ಡಿಕ್ರಿದಾರರ ಪರ ಶ್ರೀ ಎ ಎನ್ ಟಿ ವಕೀಲರಿಂದಃ</u>**

ನಾನು ಗಡಿ ಗುರುತಿಸುವ ಕಾಲಕ್ಕೆ ಈ ಹಿಂದೆ ಸರ್ವೆ ನಂಬರ್ 141/2 ಮತ್ತು 142/2 ರಲ್ಲಿ ಆಗಿದ್ದ ಹದ್ದು ಬಸ್ತು ನಕಾಶೆ ದಾಖಲೆಯನ್ನು ನಾನು ನೋಡಿಲ್ಲ. ಗಡಿ ಗುರುತಿಸುವ ಕಾಲಕ್ಕೆ ಸದರಿ ಸರ್ವೆ ನಂಬರ್ ಗಳಲ್ಲಿ ಎಷ್ಟು ವಿಸ್ತೀರ್ಣದ ಆಸ್ತಿ ಸ್ವಾಧೀನವನ್ನು ಡಿಕ್ರಿದಾರರಿಗೆ ಕೊಡಬೇಕೆಂದು ನ್ಯಾಯಾಲಯ ಮಾಡಿರುವ ಆದೇಶದ ದಾಖಲೆಯನ್ನು ನಾನು ನೋಡಿಲ್ಲ. ನ್ಯಾಯಾಲಯದ ಆದೇಶದ ಏನೀದೆ ಎಂಬ ಬಗ್ಗೆ ನನಗೆ ಗೊತ್ತಿಲ್ಲ.

ಗಡಿ ಗುರುತಿಸಿದ ಸಂಬಂಧ ಪ್ರತ್ಯೇಕ ದಾಖಲೆ ಬರೆದಿದ್ದೆ. ಸದರಿ ದಾಖಲೆಯನ್ನು ಬೇಲಿಫ್ ರವರಿಗೆ ಕೊಟ್ಟಿಲ್ಲ. ಸದರಿ ದಾಖಲೆಗಳನ್ನು ನಮ್ಮ ಕಛೇರಿಗೆ ಕೊಟ್ಟಿದ್ದೇನೆ. ಗಡಿ ಗುರುತಿಸಿದ ಬಗ್ಗೆ ಹೇಳಿಕೆ ಪಡೆದು ಮಹಜರ್ ಮಾಡಿದ್ದೇನೆ. ಸದರಿ ದಾಖಲೆಯನ್ನು ಬೇಲಿಫ್ ರವರಿಗೆ ಕೊಟ್ಟಿಲ್ಲ.

ನಿಸಿ–1 ರಿಂದ 3 ರ ದಾಖಲೆಗಳನ್ನು ಓದಿ ಸಹಿ ಮಾಡಿದ್ದೇನೆ. ಸದರಿ ದಾಖಲೆಗಳಲ್ಲಿ ನಾನು ಸರ್ವೆ ನಂಬರ್ 141/2 ಮತ್ತು 142/2 ರ ಜಮೀನುಗಳನ್ನು ಅಳತೆ ಮಾಡಿದ ಬಗ್ಗೆಯಾಗಲೀ ಅಥವಾ ಗಡಿ ಗುರುತಿಸಿದ ಬಗ್ಗೆಯಾಗಲೀ ನಮೂದಾಗಿಲ್ಲ ಎಂದರೆ ಸಾಕ್ಷಿ ನೆನಪಿಲ್ಲ ಎನ್ನುತ್ತಾರೆ. ಸದರಿ ಸರ್ವೆ ನಂಬರಿನಲ್ಲಿ ಈ ಹಿಂದೆ ಒತ್ತುವರಿಯಾಗಿದೆ ಎಂದು ಗುರುತಿಸಲಾಗಿದ್ದ ಸರ್ವೇ ದಾಖಲೆಗಳನ್ನು ಅಳತೆ ಕಾಲಕ್ಕೆ ಪರಿಶೀಲನೆ ಮಾಡಿಲ್ಲ ಮತ್ತು ಸದರಿ ದಾಖಲೆಗಳನ್ನು ನಾನು ಗಡಿ ಗುರುತಿಸಿದಾಗ ಬರೆದುಕೊಂಡೆ ಎನ್ನಲಾದ ದಾಖಲೆಗಳ ಜೊತೆ ತುಲನೆ ಮಾಡಿಲ್ಲ. ತಲಾ 2 ಗುಂಟೆ ವಿಸ್ತೀರ್ಣ ಇರುವ ದಾವಾ ಷೆಡ್ಯೂಲ್ ಸಿ ಮತ್ತು ಡಿ ಹಾಗೂ 10 ಗುಂಟೆ ವಿಸ್ತೀರ್ಣದ ಇ ಷೆಡ್ಯೂಲ್ ಸ್ವತ್ತಿನ ಗಡಿ ಗುರುತಿಸಿದ್ದೇನೆ ಎಂದು ತೋರಿಸಲು ಪ್ರತ್ಯೇಕವಾದ ನಕ್ಷೆ ತಯಾರಿಸಿಲ್ಲ. ಆ ಬಗ್ಗೆ ದಾಖಲೆಗಳನ್ನು ನಮ್ಮ ಕಛೇರಿಗೆ ಕೊಟ್ಟಿಲ್ಲ. ನಮ್ಮ

ಕಛೇರಿಗೆ ಕೊಟ್ಟ ದಾಖಲೆಗಳಲ್ಲಿ ಒತ್ತುವರಿಯಾದ 14 ಗುಂಟೆ ಜಮೀನಿನ ಪ್ರತ್ಯೇಕ ನಕಾಶೆ ಇಲ್ಲ.

ನ್ಯಾಯಾಲಯದ ಆದೇಶ ಅಥವಾ ಡಿಕ್ರಿ ಬಗ್ಗೆ ನನಗೆ ಮಾಹಿತಿ ಇರಲಿಲ್ಲ ಎಂದರೆ ಸರಿ. ನ್ಯಾಯಾಲಯದ ಬೇಲಿಫ್ ರವರು ಬರೆದಿರುವ ನಿಸಿ–1 ರಿಂದ 3 ರ ದಾಖಲೆಗಳ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ ಮತ್ತು ಅವುಗಳ ಮೇಲೆ ನಾನು ಸಹಿ ಮಾತ್ರ ಹಾಕಿದ್ದೇನೆ ಎಂದರೆ ಸರಿ. ಎ ಮತ್ತು ಬಿ ಷೆಡ್ಯೂಲ್ ಸ್ವತ್ತುಗಳ ಸ್ವಾಧೀನವನ್ನು ಡಿಕ್ರಿದಾರರಿಗೆ ಕೊಡುವ ಬಗ್ಗೆ ನ್ಯಾಯಾಲಯದ ಆದೇಶ ಇಲ್ಲದಿದ್ದರೂ ಸಹ ಸದರಿ ಸ್ವತ್ತುಗಳನ್ನು ಸಹ ಸ್ವಾಧೀನಕ್ಕೆ ಕೊಟ್ಟಿರುವ ಬಗ್ಗೆ ನಿಸಿ–1 ರಿಂದ 3 ರ ದಾಖಲೆಗಳಲ್ಲಿ ಉಲ್ಲೇಖ ಇದೆ ಎಂದರೆ ಸರಿ. 14 ಗುಂಟೆ ಒತ್ತುವರಿ ಜಾಗವನ್ನು ಗುರುತಿಸಿ ಅದರ ಸ್ವಾಧೀನವನ್ನು ಡಿಕ್ರಿದಾರರಿಗೆ ಕೊಡಬೇಕೆಂದು ನ್ಯಾಯಾಲಯದ ಆದೇಶ ಇದೆ ಎನ್ನುವುದು ನನಗೆ ಗೊತ್ತಿಲ್ಲ. ನ್ಯಾಯಾಲಯದ ಡಿಕ್ರಿಯನ್ನು ಸರಿಯಾಗಿ ಅರ್ಥ ಮಾಡಿಕೊಳ್ಳದೇ ಮತ್ತು ಸದರಿ ಡಿಕ್ರಿಯ ಅನುಗುಣವಾಗಿ ಕಾರ್ಯ ನಿರ್ವಹಿಸದೇ ತಪ್ಪಾದ ವರದಿ ಸಲ್ಲಿಸಲಾಗಿದೆ ಎನ್ನುವುದು ಸರಿಯಲ್ಲ.

ದಾವಾ ಸ್ವತ್ತುಗಳಿಗೆ ಹೋದಾಗ ಅದರ ಗಡಿ ಗುರುತಿಸಲು ಅಥವಾ ಅಳತೆ ಮಾಡಲು ಯಾವುದೇ ರೀತಿ ತೊಂದರೆಯಾಗಿಲ್ಲ. ಗಡಿ ಗುರುತಿಸುವ ಸಂದರ್ಭದಲ್ಲಿ ನಾನು ಬರೆದುಕೊಂಡಿರುವ ದಾಖಲೆಗಳನ್ನು ಬೇಲಿಫ್ ರವರಿಗೆ ಕೊಡಲು ತೊಂದರೆ ಇರಲಿಲ್ಲ ಎಂದರೆ ಸರಿ. ಸದರಿ ವರದಿಗಳನ್ನು ನ್ಯಾಯಾಲಯಕ್ಕೆ ಕೊಡಬೇಕಿತ್ತು ಎನ್ನುವುದು ನನಗೆ ಗೊತ್ತಿಲ್ಲ.

ನಾನು ಈ ಹಿಂದೆ ಸಹ ನ್ಯಾಯಾಲಯದ ಆದೇಶದಂತೆ ಬೇಲಿಫ್ ಗೆ ಸಹಾಯ ಮಾಡಲು ಭೂ ಮಾಪನ ಕೆಲಸವನ್ನು ಮಾಡಿದ್ದೇನೆ. ನ್ಯಾಯಾಲಯದ ಡಿಕ್ರಿಯಂತೆ

ಒತ್ತುವರಿಯಾದ ಜಮೀನಿನ ಸ್ವಾಧೀನವನ್ನು ಕೊಡಿಸುವ ಸಂದರ್ಭದಲ್ಲಿ ಭೂ ಮಾಪನ ಮಾಡಿರುವ ಅನುಭವ ನನಗಿಲ್ಲ ಎನ್ನುವುದು ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ ಕೇ ಸರಿ ಇ ಎ ಒಪ್ಪಿಕೊಳ್ಳಲಾಯಿತು.

c/c. 1 ನೇ ಹೆಚ್ಚುವರಿ ಪ್ರ.ದ.ನ್ಯಾದಂ. ಭದ್ರಾವತಿ